**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಸುಳ್ಯ ದ.ಕ.**

**ಸಿ.ಸಿ.ಸಂ.295/2022**

ಫಿರ್ಯಾದುದಾರರು ಃ ಸರ್ಕಾರದ ಪರ ಬೆಳ್ಳಾರೆ ಆರಕ್ಷಕರು

ಃಃ ವಿರುದ್ಧ ಃಃ

ಆರೋಪಿಗಳು ಃ

1. **ಪ್ರದೀಪ ಎ, ಬಿನ್ ರಾಮಣ್ಣ ಗೌಡ,**
   ಪ್ರಾಯ 28 ವರ್ಷ, ವಾಸಃ ಎಡಮಂಗಲ ರಥಬೀದಿ ಮನೆ,
   ಎಡಮಂಗಲ ಗ್ರಾಮ, ಸುಳ್ಯ ತಾಲೂಕು.

2. **ದಿನೇಶ ಕೆ, ಬಿನ್ ಕುಂಞಪ್ಪ ಗೌಡ,**
   ಪ್ರಾಯ 30 ವರ್ಷ, ವಾಸಃ ಕಲ್ಲರ್ಪೆ ಮನೆ,
   ಎಡಮಂಗಲ ಗ್ರಾಮ, ಸುಳ್ಯ ತಾಲೂಕು.

3. **ಯೊಗೀಶ, ಬಿನ್ ರಾಮಣ್ಣ ಗೌಡ,**
   ಪ್ರಾಯ 33 ವರ್ಷ, ವಾಸಃ ರಥಬೀದಿ ಮನೆ,
   ಎಡಮಂಗಲ ಗ್ರಾಮ, ಸುಳ್ಯ ತಾಲೂಕು.

## ಃಃ ದೋಷಾರೋಪಣೆ ಃಃ

ಅರ್ಪಿತಾ ಬಿ .ಎ .(ಲಾ ), ಎಲ್ .ಎಲ್ .ಬಿ ., ಸಿ .ಜೆ ಮತ್ತು ಜೆ.ಎಂ.ಎಫ್.ಸಿ., ಸುಳ್ಯ ಆದ ನಾನು ಮೇಲ್ಕಂಡ ಆಪಾದಿತರಾದ ನಿಮ್ಮ ಮೇಲೆ ಕೆಳಕಂಡಂತೆ ಆರೋಪಗಳನ್ನು ಹೊರಿಸುತ್ತಿದ್ದೇನೆ.

ಮೊದಲನೇಯದಾಗಿ, ಆರೋಪಿತರಾದ ನೀವುಗಳು, ದಿನಾಂಕ 02/01/2018 ರಂದು ಸುಳ್ಯ ತಾಲೂಕು, ಎಡಮಂಗಲ ಗ್ರಾಮದ, ಕುಮಾರಾಧಾನದಿಯ ನಾಕೂರು ಕಯ ಎಂಬಲ್ಲಿನ ನದಿ ದಡದಲ್ಲಿ, ನಿಮ್ಮ ವಾಹನ ನಂಬ್ರ ಕೆಎ 21 ಬಿ 4633 ಪಿಕಪ್ ವಾಹನವೊಂದರಲ್ಲಿ ನೀವುಗಳು ಅಧಿಕ ಹಣ ಗಳಿಸುವ ಉದ್ದೇಶದಿಂದ ಶೇಖರಣೆಯಾದ ಸರಕಾರಿ ಸೊತ್ತು ಮರಳನ್ನು ಸರಕಾರಕ್ಕೆ ಯಾವುದೇ ರಾಜಸ್ವವನ್ನು ಪಾವತಿಸಿ

ಪರವಾನಿಗೆಯನ್ನು ಪಡೆಯದೇ ಕಳವು ಮಾಡಿಕೊಂಡು ಹೋಗಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 379 ಸಹವಾಚಕ 34 ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಮಾಡಿರುವಿರಿ?

ಮೇಲ್ಕಂಡ ಆರೋಪದ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಸ್ಥಳಃ ಸುಳ್ಯ
ದಿನಾಂಕಃ 21-07-2025

ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಸುಳ್ಯ,ದ.ಕ.